# ಫೇಸ್‌ಬುಕ್ ಅಲ್ಲ ಮೆಟಾ!



**■ ಶಶಿಕುಮಾರ್ ಸಿ.**

ಫೇಸ್‌ಬುಕ್ ಈಚೆಗೆ ತನ್ನ ಕಾರ್ಪೊರೇಟ್ ವ್ಯವಹಾರದ ಹೆಸರನ್ನು ಬದಲಿಸಿಕೊಂಡಿದ್ದು, ಕಾರ್ಪೊರೇಟ್ ಜಗತ್ತಿನಲ್ಲಿ ಇನ್ನುಮುಂದೆ 'ಮೆಟಾ' ಎಂದು ಗುರುತಿಸಿಕೊಳ್ಳಲಿದೆ. ಫೇಸ್‌ಬುಕ್, ಇನ್‌ಸ್ಟಾಗ್ರಾಂ ಮತ್ತು ವಾಟ್ಸಾಪ್ ಸೇರಿದಂತೆ ಫೇಸ್‌ಬುಕ್ ಒಡೆತನದ ಎಲ್ಲ ಆ್ಯಪ್‌ಗಳು ಇನ್ನು ಮುಂದೆ 'ಮೆಟಾ' ಹೆಸರಿಂದಲೇ ವ್ಯವಹಾರ ನಡೆಸಲಿವೆ. ಡಿಸೆಂಬರ್ 1ರಿಂದ ತನ್ನ ಷೇರುಗಳ ವಹಿವಾಟನ್ನು ಹೊಸ ಹೆಸರಿನಿಂದ ಆರಂಭಿಸಲು ಬಯಸಿರುವುದಾಗಿಯೂ ಫೇಸ್‌ಬುಕ್ ತಿಳಿಸಿದೆ.

ತನ್ನ ಅಧೀನದಲ್ಲಿ ವ್ಯವಹರಿಸುತ್ತಿರುವ ಎಲ್ಲ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ನಿರ್ವಹಣೆ ಹಾಗೂ ಭವಿಷ್ಯದ ಎಲ್ಲ ಯೋಜನೆಗಳು 'ಮೆಟಾ' ಎಂಬ ಬ್ರ್ಯಾಂಡ್ ಹೆಸರಿನ ಅಡಿಯಲ್ಲೇ ನಡೆಯಲಿವೆ ಎಂದು ಈಚೆಗೆ ಅಧಿಕೃತವಾಗಿ ಘೋಷಣೆ ಮಾಡಿರುವ ಕಂಪನಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮಾರ್ಕ್ ಜುಕರ್‌ಬರ್ಗ್, 'ಕಾರ್ಪೊರೇಟ್ ಹೆಸರಿನ ಮರು ನಾಮಕರಣದ ಬಳಿಕವೂ ಫೇಸ್‌ಬುಕ್, ಇನ್‌ಸ್ಟಾಗ್ರಾಂ ಮತ್ತು ವಾಟ್ಸಾಪ್ ಆ್ಯಪ್‌ಗಳು ತಮ್ಮ ಮೂಲ ಹೆಸರುಗಳನ್ನು ಉಳಿಸಿಕೊಳ್ಳಲಿವೆ' ಎಂದಿದ್ದಾರೆ.

ಗ್ರೀಕ್ ಮೂಲದ 'ಮೆಟಾ' ಪದವು 'ಆಚೆ' ಅಥವಾ 'ಮೀರುವ' ಎಂಬ ಅರ್ಥವನ್ನು ನೀಡುತ್ತದೆ. ಮೆಟಾ ಎಂಬುದು ಮೆಟಾವರ್ಸ್‌ನ ಸಂಕ್ಷಿಪ್ತ ಹೆಸರು. ವಾಸ್ತವಿಕ ಜಗತ್ತಿನಿಂದ ದೂರ ಉಳಿಯುವ ಹಾಗೂ ತಪ್ಪಿಸಿಕೊಳ್ಳುವ ವರ್ಚ್ಯುವಲ್ ಜಗತ್ತಿನ ಜನರನ್ನು 'ಮೆಟಾವರ್ಸ್' ಎಂದು ಕರೆಯಲಾಗುತ್ತದೆ. ಈ ಪದವನ್ನು ಅಮೆರಿಕದ ಕಾದಂಬರಿಕಾರ ನೀಲ್ ಸ್ಟೀಫನ್‌ಸನ್ ತಮ್ಮ 'ಸ್ನೋ ಕ್ರ್ಯಾಶ್' ಎಂಬ ಸೈನ್ಸ್ ಫಿಕ್ಷನ್




ಕಾದಂಬರಿಯಲ್ಲಿ ಬಳಸಿದ್ದಾರೆ.

'ಮೆಟಾವರ್ಸ್' ವರ್ಚುವಲ್ ರಿಯಾಲಿಟಿಗೆ ಹೆಚ್ಚಿನ ಆದ್ಯತೆ ನೀಡುವ ಸುಳಿವು ಸಿಕ್ಕಿದ್ದು, ಕಂಪನಿಯ ಮಹಾತ್ವಾಕಾಂಕ್ಷೆಯ ಗುರಿಗಳನ್ನು ತಲುಪುವ ಉದ್ದೇಶದಿಂದ ಫೇಸ್‌ಬುಕ್ ತನ್ನ ಕಾರ್ಪೊರೇಟ್ ಹೆಸರನ್ನು ಬದಲಿಸಿಕೊಂಡಿದೆ ಎನ್ನಲಾಗಿದೆ.

'ಜನರನ್ನು ಒಟ್ಟಿಗೆ ತರುವುದು, ನಮ್ಮ ಆ್ಯಪ್‌ಗಳು ಮತ್ತು ಅವುಗಳ ಬ್ರ್ಯಾಂಡ್‌ಗಳ ಹೆಸರಿನಲ್ಲಿ ಯಾವುದೇ ಬದಲಾವಣೆ ಆಗದು' ಎಂದಿದ್ದಾರೆ ಜುಕರ್‌ಬರ್ಗ್. ಫೇಸ್‌ಬುಕ್, ಇನ್‌ಸ್ಟಾಗ್ರಾಂ ಮತ್ತು ವಾಟ್ಸಾಪ್ ಆ್ಯಪ್‌ಗಳು ಈ ಹಿಂದೆ ಫೇಸ್‌ಬುಕ್ ಎನ್ನುವ ಒಂದೇ ಬ್ರ್ಯಾಂಡ್ ಅಡಿಯಲ್ಲಿದ್ದು, ಅವುಗಳನ್ನು ಫೇಸ್‌ಬುಕ್ ಹೆಸರಿನಿಂದಲೇ ಗುರುತಿಸಲಾಗುತ್ತಿತ್ತು. ಇನ್ನು ಮುಂದೆ ಫೇಸ್‌ಬುಕ್ ಸೇರಿದಂತೆ ಕಂಪೆನಿಯ ಎಲ್ಲ ವಹಿವಾಟು 'ಮೆಟಾ' ಬ್ರ್ಯಾಂಡ್ ಹೆಸರಿನಲ್ಲಿ ನಡೆಯಲಿದೆ.

ಫೇಸ್‌ಬುಕ್ ಎಂಬ ಬ್ರ್ಯಾಂಡ್, ಭವಿಷ್ಯದ ಯೋಜನೆಗಳು ನಾವು ಮಾಡುತ್ತಿರುವ ಪ್ರತಿ ಕೆಲಸವನ್ನು ಪ್ರತಿನಿಧಿಸುತ್ತಿಲ್ಲ. ಹೀಗಾಗಿ ಬದಲಾವಣೆ ಅಗತ್ಯವಿದೆ ಎಂದು ಹೆಸರು ಬದಲಾವಣೆಗೆ ಸ್ಪಷ್ಟಣೆ ನೀಡಿದ್ದಾರೆ ಜುಕರ್‌ಬರ್ಗ್. 'ಮೆಟವರ್ಸ್' ಅಂದರೆ ಜನರು ವಿಆರ್ ಹೆಡ್‌ಫೋನ್ ಬಳಸಿ ವರ್ಚುವಲ್ ರಿಯಾಲಿಟಿಯಲ್ಲಿ (ವಿಆರ್) ಆಟ ಆಡುವ, ಕೆಲಸ ಮಾಡುವ ಹಾಗೂ ಸಂವಹನ ನಡೆಸುವಂತಹ ಆನ್‌ಲೈನ್ ಜಗತ್ತು. ಇಂತಹ ಜಗತ್ತನ್ನು ಅತ್ಯಂತ ಆಧುನಿಕ ತಂತ್ರಜ್ಞಾನ ಹಾಗೂ ಪರಿಣಾಮಕಾರಿಯಾಗಿ ನಿರ್ಮಿಸುವ ಯೋಜನೆಯನ್ನು ಫೇಸ್‌ಬುಕ್ ಅಲ್ಲಲ್ಲ 'ಮೆಟಾ' ಹೊಂದಿದೆ. ಈ ನಿಟ್ಟಿನಲ್ಲೇ ತನ್ನ ಕಾರ್ಪೊರೇಟ್ ಹೆಸರನ್ನು 'ಮೆಟಾ' ಎಂದು ಮರುನಾಮಕರಣ ಮಾಡಿಕೊಂಡಿದೆ.

ಡಿಜಿಟಲ್ ಪರಿಸರದ ಎಲ್ಲ ಸಂಗತಿಗಳಿಗೂ ಸಂಪರ್ಕಿಸುವ ವರ್ಚುವಲ್ ಜಗತ್ತನ್ನು ಪ್ರವೇಶಿಸಲು ಮೆಟಾವರ್ಸ್ ಬಳಕೆದಾರರು ಹೆಡ್‌ಸೆಟ್ ಬಳಸಬೇಕಾಗುತ್ತದೆ. ವರ್ಚುವಲ್ ಜಗತ್ತು ಕೆಲಸ, ಆಟ, ಕಾರ್ಯಕ್ರಮಗಳು ಹಾಗೂ ಸ್ನೇಹಿತರು ಮತ್ತು ಕುಟುಂಬದವರೊಂದಿಗೆ ಬೆರೆಯುವ ಅವಕಾಶವನ್ನು ನೀಡುತ್ತದೆ.

## ಗಮನ ಬೇರೆಡೆ ಸೆಳೆಯುವ ತಂತ್ರ!

ಫೇಸ್‌ಬುಕ್ ತನ್ನ ಹೆಸರು ಬದಲಿಸುವ ಬಗ್ಗೆ ಅಧಿಕೃತವಾಗಿ ಘೋಷಣೆ ಮಾಡುವ ಮುನ್ನವೇ ಆ ವಿಷಯವು ಸೋರಿಕೆಯಾಗಿತ್ತು. ಇದರ ಬಗ್ಗೆ ಹಲವರು ಟೀಕೆಯನ್ನು ಮಾಡಿದ್ದು, 'ಇತ್ತೀಚೆಗೆ ಫೇಸ್‌ಬುಕ್ ಮೇಲೆ ಗಂಭೀರವಾದ ಆರೋಪಗಳು ಕೇಳಿಬಂದಿದ್ದವು. ಸುರಕ್ಷತೆಗಿಂತ ಲಾಭಕ್ಕೆ ಫೇಸ್‌ಬುಕ್ ಹೆಚ್ಚಿನ ಆದ್ಯತೆ ನೀಡುತ್ತದೆ ಎಂದು ಕಂಪನಿಯ ಮಾಜಿ ಉದ್ಯೋಗಿ ಫ್ರಾನ್ಸಿಸ್ ಹೌಗನ್ ಆರೋಪಿಸಿದ್ದರು. ಈ ಎಲ್ಲ ವಿಚಾರಗಳಿಂದ ಫೇಸ್‌ಬುಕ್ ಪ್ರಾಬಲ್ಯಕ್ಕೆ ಜಾಗತಿಕ ಮಟ್ಟದಲ್ಲಿ ಹೊಡೆತ ಬಿದ್ದಿತ್ತು. ಇದರಿಂದ ಹೊರಬರುವ ಸಲುವಾಗಿ ಅಂತರ್ಜಾಲ ಬಳಕೆದಾರರ ಗಮನ ಬೇರೆಡೆ ಸೆಳೆಯಲು ತನ್ನ ಹೆಸರನ್ನು ಬದಲಿಸಿಕೊಳ್ಳಲು ಹೊರಟಿದೆ' ಎನ್ನುವ ವಿಶ್ಲೇಷಣೆಗಳೂ ಇವೆ. ■